# ಶ್ರದ್ಧಾ ಕಪೂರ್ ಖುಷಿ

ನಾಗರಹಾವನ್ನು ಬಾಲಿವುಡ್ ಬೆಂಬತ್ತಿ ವರ್ಷಗಳೇ ಉರುಳಿವೆ. ಬೇರೆಲ್ಲ ಕಥೆಗಳು ಬೋರ್ ಹೊಡೆದಾಗ ಬಾಲಿವುಡ್ ನಿರ್ಮಾಪಕರು ನಾಗರಹಾವನ್ನು ಕಥಾನಾಯಕಿಯಾಗಿಸಿ ಭರ್ಜರಿ ನೃತ್ಯಗಳನ್ನೂ ಸೇರಿಸಿ ಸಿನಿಮಾ ತಯಾರಿಸುವುದುಂಟು. ನಾಗರಹಾವು ಅಂದ ಮೇಲೆ ಸೇಡು ಇರಲೇಬೇಕಲ್ಲ. ಪ್ರೇಕ್ಷಕರೂ ಇಂತಹ ಕಥೆಗಳನ್ನು ತಮ್ಮ ಮೇಲಿನ ಸೇಡು ಎಂದು ಭಾವಿಸದೆ ಚಿತ್ರಗಳನ್ನು ಬಾಕ್ಸಾಫೀಸ್‌ನಲ್ಲಿ ಗೆಲ್ಲಿಸುವುದುಂಟು. ಹಾಗಾಗಿ ನಾಗರಹಾವು ಮನುಷ್ಯರೂಪದಲ್ಲಿ ಮತ್ತೆ ಮತ್ತೆ ಬಾಲಿವುಡ್‌ನಲ್ಲಿ ತೆರೆಗೆ ಬರುತ್ತಲೇ ಇದೆ.

‘ನಾಗಿನ್’ ಎನ್ನುವ ಹೊಸ ಸಿನಿಮಾವೊಂದು ಈಗ ಬಾಲಿವುಡ್‌ನಲ್ಲಿ ಸುದ್ದಿ ಮಾಡುತ್ತಿದೆ. ಶ್ರದ್ಧಾ ಕಪೂರ್ ಈ ಚಿತ್ರದ ನಾಯಕಿ. ಮೂರು ವರ್ಷಗಳ ಹಿಂದೆ ಯಶಸ್ವಿ ಮರಾಠಿ ಹಾರರ್ ಸಿನಿಮಾ ‘ಪಾಚ್ಚಪಿ’ಯನ್ನು ನಿರ್ದೇಶಿಸಿದ ವಿಶಾಲ್ ಫೂರಿಯಾ ಈ ಚಿತ್ರದ ನಿರ್ದೇಶಕ. ಶ್ರದ್ಧಾ ಅಭಿಮಾನಿಗಳು ಈ ಸುದ್ದಿಯಿಂದ ಫುಲ್ ಖುಷ್ ಆಗಿದ್ದಾರಂತೆ. ಈಗಾಗಲೆ ನಾಗಿನ್ ರೂಪದಲ್ಲಿ ಶ್ರದ್ಧಾ ಹೇಗೆ ಕಾಣಬಹುದು ಎಂಬುದನ್ನು ಊಹಿಸಿ ಅಭಿಮಾನಿಗಳೇ ಜಾಲತಾಣಗಳಲ್ಲಿ ಆಕೆಯ ಚಿತ್ರಗಳನ್ನು ಹರಿಬಿಡುತ್ತಿದ್ದಾರೆ! ಚಿತ್ರದ ಪೋಸ್ಟರ್‌ಅನ್ನು ನಿರ್ಮಾಪಕರು ಬಿಡುಗಡೆ ಮಾಡುವುದಕ್ಕೆ ಮುನ್ನವೇ ಪೇಂಟಿಂಗ್ ಮತ್ತು ಡಿಜಿಟಲ್ ಕಲೆಯ ರೂಪದಲ್ಲಿ ನಾಗಿನ್ ಚಿತ್ರಗಳು ಹರಿದಾಡುತ್ತಿವೆ. ತಮ್ಮ ಚಿತ್ರಕ್ಕೆ ಅನಾಯಾಸ ಪ್ರಚಾರ ದೊರೆಯುತ್ತಿರುವುದಕ್ಕೆ ನಿರ್ಮಾಪಕರೂ ಖುಷಿಯಾಗಿದ್ದಾರಂತೆ. ಅಭಿಮಾನಿಗಳು ಬಿಡಿಸಿದ, ನಾಗಿನ್ ರೂಪದ ತನ್ನ ಕೆಲವು ಚಿತ್ರಗಳನ್ನು ಸ್ವತಃ ಶ್ರದ್ಧಾ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾಳೆ. ಅಭಿಮಾನಿಗಳ ಪ್ರೀತಿ ಕಂಡು ಮನಸ್ಸು ತುಂಬಿ ಬಂದಿದೆ.

ಬಾಲಿವುಡ್‌ನಲ್ಲಿ ಶ್ರದ್ಧಾ ಅದೃಷ್ಟವಂತ ನಟಿ ಎನ್ನುವುದರಲ್ಲಿ ಎರಡು ಮಾತಿಲ್ಲ. ‘ಸ್ಟ್ರೀಟ್ ಡ್ಯಾನ್ಸರ್’ನಿಂದ ಹಿಡಿದು ‘ಬಾಗಿ 3’ವರೆಗೆ ವಿಭಿನ್ನ ಪಾತ್ರಗಳೇ ಆಕೆಗೆ ಸಿಕ್ಕಿವೆ. ಈಗ ‘ನಾಗಿನ್’ ಕೂಡಾ ಇನ್ನೊಂದು ವಿಭಿನ್ನತೆಯ ಚಿತ್ರವೇ. ಲಾಕ್‌ಡೌನ್ ಅವಧಿಯಲ್ಲಿ ಶ್ರದ್ಧಾ ಹಲವು ಚಿತ್ರಕಥೆಗಳನ್ನು ಓದಿದರಂತೆ. ನಾಗಿನ್ ಬಳಿಕ ರಣಬೀರ್ ಕಪೂರ್ ಜೊತೆ ನಟಿಸಲಿರುವ ಚಿತ್ರದ ಕಥೆಯೊಂದನ್ನು ಓದಿ ಆಕೆ ಈಗಾಗಲೆ ಒಪ್ಪಿಗೆ ಸೂಚಿಸಿದ್ದಾಳಂತೆ. ಈ ಮಧ್ಯೆ ಭಾರತೀಯ ಸೆಲೆಬ್ರಿಟಿಗಳ ಪೈಕಿ ಅತ್ಯಧಿಕ ಹಿಂಬಾಲಕರು ಇರುವ ನಟಿ ಎಂಬ ಬಿರುದೂ ಈಗ ಶ್ರದ್ಧಾ ಮುಡಿಗೇರಿದೆ. ಈ ಸ್ಥಾನದಲ್ಲಿದ್ದ ದೀಪಿಕಾಳನ್ನು ಶ್ರದ್ಧಾ ಹಿಂದಿಕ್ಕಿ ಸುದ್ದಿ ಮಾಡಿದ್ದಾಳೆ.





# ‘ಸುದ್ದಿ ಸುಂದರಿ’ ಮಲ್ಲಿಕಾ

ಕೈಯಲ್ಲಿ ಸಿನಿಮಾಗಳು ಇಲ್ಲದಿದ್ದರೂ ಒಂದಲ್ಲ ಒಂದು ಕಾರಣಕ್ಕೆ ಸದಾ ಸುದ್ದಿಯಲ್ಲಿರುವ ನಟಿಯರ ದಂಡೇ ಬಾಲಿವುಡ್‌ನಲ್ಲಿದೆ. ಅವರಲ್ಲಿ ಮುಂಚೂಣಿಯಲ್ಲಿ ಇರುವಾಕೆ ಮಲ್ಲಿಕಾ ಶೆರಾವತ್. ಈಗ ಮತ್ತೆ ಮಲ್ಲಿಕಾ ಸುದ್ದಿಯಲ್ಲಿದ್ದಾಳೆ. ಅದಕ್ಕೆ ಕಾರಣ ಅಮೆರಿಕದ ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್ ಆಯ್ಕೆ ಆಗಿರುವುದು!

ಕಮಲಾ ಹ್ಯಾರಿಸ್‌ಗೂ ಮಲ್ಲಿಕಾಗೂ ಎತ್ತಣಿಂದೆತ್ತಣ ಸಂಬಂಧವಯ್ಯ.. ಎನ್ನದಿರಿ. ಹತ್ತು ವರ್ಷಗಳ ಹಿಂದೆ ಮಲ್ಲಿಕಾ ಶೆರಾವತ್ ಇದೇ ಕಮಲಾ ಹ್ಯಾರಿಸ್ ಅವರ ಜೊತೆಗೆ ಫೋಟೊ ತೆಗೆಸಿಕೊಂಡಿದ್ದಾಳೆ. ಕಮಲಾ ಮುಂದೊಂದು ದಿನ ದೊಡ್ಡ ಹುದ್ದೆಗೆ ಏರಲಿದ್ದಾರೆ ಎಂದು ಆಗಲೇ ಟ್ವಿಟ್ಟರ್‌ನಲ್ಲಿ ಮಲ್ಲಿಕಾ ಭವಿಷ್ಯ ನುಡಿದಿದ್ದಾಳೆ. ಈಗ ಕಮಲಾ ಅವರು ಅಮೆರಿಕದ ಉಪಾಧ್ಯಕ್ಷೆಯಾಗಿ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ಬಳಿಕ ಆ ಹಳೆಯ ಟ್ವಿಟ್ಟರ್ ನುಡಿ ಮತ್ತು ಫೋಟೊಗೆ ಜೀವ ಬಂದಿದೆ. ಎಲ್ಲೆಂದರಲ್ಲಿ ಫೋಟೊ ಹರಿದಾಡುತ್ತಿದೆ.

ಸಿನಿಮಾಗಳಲ್ಲಿ ವಿವಾದ ಹುಟ್ಟಿಸುವಂತಹ ದೃಶ್ಯಗಳಲ್ಲಿ ನಟಿಸುವುದರಲ್ಲಿ ಮಲ್ಲಿಕಾ ಎತ್ತಿದ ಕೈ ಎನ್ನುವುದರಲ್ಲಿ ಎರಡು ಮಾತಿಲ್ಲ. ಆಕೆ ನಟಿಸಿದ ಮೊದಲ ಚಿತ್ರ ‘ಖ್ವಾಹಿಸ್’ನಲ್ಲಿ ತೆರೆಯ ಮೇಲೆ ಒಟ್ಟು 17 ಚುಂಬನದ ದೃಶ್ಯಗಳಲ್ಲಿ ನಟಿಸಿದ್ದು ಆಗ ದೊಡ್ಡ ವಿವಾದವಾಗಿತ್ತು. ತೆರೆಯ ಮೇಲೆ ಅವಕಾಶ ಇಲ್ಲದಿದ್ದರೂ ತೆರೆಯ ಹಿಂದೆಯೂ ತಾನು ಸುದ್ದಿ ಮಾಡಬಲ್ಲೆ ಎನ್ನುವುದನ್ನು ಆಕೆ ಪದೇ ಪದೇ ಸಾಬೀತು ಪಡಿಸಿದ್ದಾಳೆ. ಈಗ ಕಮಲಾ ಹ್ಯಾರಿಸ್ ಜೊತೆಗಿನ ಫೋಟೊ ಇಂತಹದ್ದೇ ಇನ್ನೊಂದು ಅವಕಾಶವನ್ನು ಸೃಷ್ಟಿಸಿದೆ.

■ ಬಿಂದು